ಜಲಮಂಡಳಿ ವಾರ್ಷಿಕ ಆದಾಯ

357 (624)

ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ)

ಅ) ಬೆಂಗಳೂರು ಜಲಮಂಡಳಿಗೆ ಎಲ್ಲಾ ಮೂಲಗಳಿಂದ ಬರುವ ವಾರ್ಷಿಕ ಆದಾಯ ಮತ್ತು ವೆಚ್ಚಗಳೆಷ್ಟು?

ಆ) ಸಂಸ್ಥೆಯು, ಬ್ಯಾಂಕುಗಳು ಮತ್ತು ಇತರೆ ಸಂಸ್ಥೆಗಳಿಂದ ನೀಡಬೇಕಾದ ಸಾಲದ ಬಾಕಿಯೆಷ್ಟು (ವಿವರ ನೀಡುವುದು)?

ಇ) ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಮೊತ್ತವೆಷ್ಟು?

ಈ) ಮಂಡಳಿಯ ಸಿಬ್ಬಂದಿ ಮತ್ತು ಅಧಿಕಾರಿಗಳ ವೇತನದ ಬಾಬ್ತು ಎಷ್ಟು ಹಾಗೂ ವಿದ್ಯುತ್ ಖರೀದಿಗಾಗಿ ಭರಿಸಬೇಕಾದ ವೆಚ್ಚವೆಷ್ಟು (ವಾರ್ಷಿಕವಾರು ವಿವರ ನೀಡುವುದು)?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)

ಅ) ವಾರ್ಷಿಕ ಆದಾಯ (ಲೆಕ್ಕ ಪರಿಶೋಧನೆಯಾಗಿರದ 2011–12ರ ವಾರ್ಷಿಕ ಲೆಕ್ಕದ ಪ್ರಕಾರ) – 611.36 ಕೋಟಿಗಳು

ವಾರ್ಷಿಕ ವೆಚ್ಚ (ಲೆಕ್ಕ ಪರಿಶೋಧನೆಯಾಗಿರದ 2011–12ರ ವಾರ್ಷಿಕ ಲೆಕ್ಕದ ಪ್ರಕಾರ) – 739.94 ಕೋಟಿಗಳು

ಆ)

ಕ್ರ ಸಂ	ಸಂಸ್ಥೆಗಳ ಹೆಸರು	ಮೊತ್ತ	ವಿವರಗಳು
1	ಭಾರತೀಯ ಜೀವ ವಿಮಾ	37.70 ಕೋಟಿಗಳು	ಕಾವೇರಿ ನೀರು ಸರಬರಾಜು ಯೋಜನೆ ಘಟ್ಟ 1,2 ಮತ್ತು 3 ಕ್ಕಾಗಿ ಪಡೆದ ಸಾಲ, ಈ ಸಾಲವನ್ನು ಮರುಪಾವತಿಸಲಾಗುತ್ತಿದೆ.

ಕ್ರ. ಸಂ	ಸಂಸ್ಥೆಗಳ ಹೆಸರು	ಮೊತ್ತ	ವಿವರಗಳು
2	ಕೆ.ಯು.ಐ.ಡಿ. ಎಫ್.ಸಿ	83.00 ಕೋಟಿಗಳು	ಮೆಗಾಸಿಟಿ ಕಾಮಗಾರಿಗಳಿಗಾಗಿ ಮತ್ತು ಬೃಹತ್ ಬೆಂಗಳೂರು ನೀರು ಸರಬರಾಜು ಯೋಜನೆ ಹಾಗೂ ಹೆಬ್ಬಾಳ ಜಿರೋ ಫ್ಲೋ ಒಳಚರಂಡಿ ಕಾಮಗಾರಿಗಾಗಿ ಪಡೆದ ಸಾಲ ಈ ಕಾಮಗಾರಿಗಳು ಚಾಲ್ತಿಯಲ್ಲಿದೆ.

ಇ) ಬೆಂಗಳೂರು ಜಲಮಂಡಳಿಯಲ್ಲಿ ಅನುದಾನದ ಕೊರತೆಯಿಂದಾಗಿ ಯಾವುದೇ ಗುತ್ತಿಗೆದಾರರಿಗೆ ನೀಡಬೇಕಾದ ಬಿಲ್ಲುಗಳ ಬಾಕಿ ಉಳಿದಿರುವುದಿಲ್ಲ.

ಈ) ಮಂಡಳಿಯ ಸಿಬ್ಬಂದಿ ಮತ್ತು ಅಧಿಕಾರಿಗಳ ವೇತನದ ಬಾಬ್ತು (ಲೆಕ್ಕ ಪರಿಶೋಧನೆಯಾಗಿರದ 2011–12ರ ವಾರ್ಷಿಕ ಲೆಕ್ಕದ ಪ್ರಕಾರ) – 123.64 ಕೋಟಿಗಳು

ವಿದ್ಯುತ್ ಖರೀದಿಗಾಗಿ ಭರಿಸಬೇಕಾದ ವೆಚ್ಚ (ಲೆಕ್ಕ ಪರಿಶೋಧನೆಯಾಗಿರದ 2011–12ರ ವಾರ್ಷಿಕ ಲೆಕ್ಕದ ಪ್ರಕಾರ) –304.80 ಕೋಟಿಗಳು